ರಾಜ್ಯ ಸರ್ಕಾರಿ ನೌಕರರ ವರ್ಗಾವಣೆ ನಿಯಮಾವಳಿ:

38 (394) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯ ಸರ್ಕಾರಿ ನೌಕರರ ವರ್ಗಾವಣೆ ಕುರಿತು ನೀತಿ ನಿಯಮಗಳನ್ನು ರೂಪಿಸಲಾಗಿದೆಯೇ? (ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

1) ದಿನಾಂಕ: 28-4-1995ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 5 ಸೇನೌವ 95 ರನ್ವಯ, ಅದನ್ನು ಕಾಲಕಾಲಕ್ಕೆ ಮಾರ್ಪಡಿಸಿದಂತೆ, ವರ್ಗಾವಣಾ ನೀತಿಯನ್ನು ನಿಗದಿಪಡಿಸಲಾಗಿದೆ.

ರೈಸ್‌ಮಿಲ್‌ಗಳಿಗೆ ವಿದ್ಯುತ್ ಸಂಪರ್ಕ:

40 (397) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿರುವ ರೈಸ್ ಮಿಲ್‌ಗಳು ಕೆಲವೇ ತಿಂಗಳು (ಸೀಸನ್‌ನಲ್ಲಿ) ಮಾತ್ರ ನಡೆಯುತ್ತಿದ್ದು, ಉಳಿದ ತಿಂಗಳಲ್ಲಿ ನಡೆಯದೆ ಇದ್ದು ಅಂತಹ ರೈಸ್‌ಮಿಲ್‌ಗಳಿಗೆ ವಿದ್ಯುತ್ ಸಂಪರ್ಕ ರದ್ದು ಪಡಿಸಲಾಗಿದೆಯೇ;

2) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಸೀಸನ್‌ನಲ್ಲಿ ಹೊರತುಪಡಿಸಿ ಉಳಿದ ತಿಂಗಳುಗಳಲ್ಲಿ ನಡೆಯದೇ ಇರುವ ರೈಸ್‌ಮಿಲ್‌ಗಳ ವಿದ್ಯುತ್ ಸಂಪರ್ಕವನ್ನು ರದ್ದು ಪಡಿಸುವ ವ್ಯವಸ್ಥೆಯನ್ನು ನಿಗಮವು ಏರ್ಪಡಿಸಿರುವುದಿಲ್ಲ. ರೈಸ್‌ಮಿಲ್‌ಗಳು ವಿದ್ಯುತ್ ಬಾಕಿಯನ್ನು ಉಳಿಸಿಕೊಂಡ ಸಂದರ್ಭಗಳಲ್ಲಿ ಮಾತ್ರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು.

2) ಉದ್ಭವಿಸುವುದಿಲ್ಲ.

ಧಾರ್ಮಿಕ ದತ್ತಿ ಇಲಾಖೆಯಿಂದ ದೇವಸ್ಥಾನಗಳಿಗೆ ಹಣ ಬಿಡುಗಡೆಮಾಡುವ, ತೋರುತ್ತಿರುವ ತಾರತಮ್ಯ:

42 (383) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಧಾರ್ಮಿಕ ದತ್ತಿ ಇಲಾಖೆಯಿಂದ ದೇವಸ್ಥಾನಗಳಿಗೆ ರಾಜ್ಯದಾದ್ಯಂತ ಬಿಡುಗಡೆ ಮಾಡಿರುವ ಹಣ ಎಷ್ಟು;

2) ಉಡುಪಿ ಜಿಲ್ಲೆಗೆ ಬಿಡುಗಡೆಯಾಗಿರುವ ಹಣವೆಷ್ಟು;

3) ದೇವಸ್ಥಾನಗಳ ದುರಸ್ಥಿಗೆ ಮತ್ತು ನವ ನಿರ್ಮಾಣಕ್ಕೆ ಕುಂದಾಪುರ ತಾಲ್ಲೂಕಿಗೆ ಹಣ ಬಿಡುಗಡೆ ಮಾಡದೆ ತಾರತಮ್ಯ ತೋರಿದ್ದು, ಏಕೆ; ಈ ಬಗ್ಗೆ ಕಾರಣ ನೀಡುವುದು?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನೂರು (ಮುಜರಾಯಿ ರಾಜ್ಯ ಸಚಿವರು)

1) 2000-01ನೇ ಸಾಲಿನಲ್ಲಿ ಹಣವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ. 99-2000ನೇ ಸಾಲಿನಲ್ಲಿ ರಾಜ್ಯದಾದ್ಯಂತ ದೇವಾಲಯಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ.

	ರೂ. ಕೋಟಿಗಳಲ್ಲಿ
ಅ) ದುರಸ್ಥಿ: ಜೀರ್ಣೋದ್ಧಾರ	ರೂ. 1.26
ಆ) ಹೊಸ ನಿರ್ಮಾಣ	ರೂ. 1.05
ಇ) ಆರಾಧನಾ ಯೋಜನೆ	ರೂ. 4.00

2) 99-200ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ಬಿಡುಗಡೆಯಾದ ಹಣದ ವಿವರ ಕೆಳಕಂಡಂತೆ ಇದೆ

ಅ) ದುರಸ್ಥಿ: ಜೀರ್ಣೋದ್ಧಾರ	ರೂ. 3.25 ಲಕ್ಷ
ಆ) ಹೊಸ ನಿರ್ಮಾಣ	ರೂ. 4.50 ಲಕ್ಷ
ಇ) ಆರಾಧನಾ ಯೋಜನೆ	ರೂ. 10.43 ಲಕ್ಷ

3) 99-2000ನೇ ಸಾಲಿನಲ್ಲಿ ಲಭ್ಯವಿದ್ದ ಅನುದಾನವನ್ನು ಅರ್ಹತೆ ಮತ್ತು ಹಣದ ಲಭ್ಯತೆಗೆ ಅನುಗುಣವಾಗಿ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಆದ್ದರಿಂದ ಕುಂದಾಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ದೇವಾಲಯಗಳ ದುರಸ್ಥಿ ಹಾಗೂ ನಿರ್ಮಾಣಕ್ಕೆ ತಾರತಮ್ಯ ಆಗಿರುವುದಿಲ್ಲ.

ಉಡುಪಿ ಜಿಲ್ಲಾ ಹಾಗೂ ಕುಂದಾಪುರ ತಾಲ್ಲೂಕಿನಲ್ಲಿ ಬಳಕೆಯಾದ ಮದ್ಯದ ಪ್ರಮಾಣ:

43 (390) **ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು):** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 1998-99ನೇ ಸಾಲಿನಲ್ಲಿ ಉಡುಪಿ ಜಿಲ್ಲಾ ಹಾಗೂ ಕುಂದಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಎಷ್ಟು ಮದ್ಯ ಬಳಕೆಯಾಗಿರುತ್ತದೆ;

2) 1999-2000ನೇ ಸಾಲಿನಲ್ಲಿ ಉಡುಪಿ ಜಿಲ್ಲಾ ಹಾಗೂ ತಾಲ್ಲೂಕು ವ್ಯಾಪ್ತಿಯಲ್ಲಿ ಬಳಕೆಯಾಗಿರುವ ಮದ್ಯ ಎಷ್ಟು;

3) 1998-99ಕ್ಕಿಂತ 1999-2000ನೇ ಸಾಲಿನಲ್ಲಿ ಕಡಿಮೆ ಮದ್ಯ ಬಳಕೆಯಾಗಿದ್ದು ಇದರ ಪ್ರಮಾಣವೆಷ್ಟು;